ದಿನಾಂಕ : 05–02–2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಕಲಂ 223 ಬಿ.ಎನ್.ಎಸ್.ಎಸ್ ಅಡಿ ಸ್ವಪ್ರಮಾಣೀಕೃತ ಹೇಳಿಕೆ**

10. ಆಶ್ರಯ ಗೃಹ ನಿರ್ಮಾಣ ಸಂಘವು ರಿ.ಸ. ನಂಬರ 787/ಅ ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ನಿವೇಶನ ಉದ್ದೇಶಕ್ಕಾಗಿ ನೀಡಿರುವ 6 ಎಕರೆ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ 50 ಪ್ರತಿಶತ ನೀಡುವ ಕುರಿತು ನಮ್ಮ ಸಮಾಜದ ಪ್ರಮುಖರಾದ ಶ್ರೀ.ಅನಿಲ ಪಿರಾಜಿ ನಂದೆ ಸಾಃಸದಲಗಾ ಮತ್ತು ಶ್ರೀ. ಸಂತೋಷ ಅಪ್ಪಾಸಾಬ ಕೆಬೂಡೆ ಇವರಿಗೆ ಸಂಘದವರು ನಮಗೆ ನೀಡಬೇಕಾದ 50 ಪ್ರತಿಶತ ಜಮೀನಿನ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ನೀಡಿರುತ್ತೇನೆ. ಆಗ ಮೇಲೆ ಹೇಳಿದ ಇಬ್ಬರೂ ಮತ್ತು ನಾನು ಸಂಘದ ಅಧ್ಯಕ್ಷರಾದ ಶ್ರೀ.ದಾದಾ ಬಾಳಪ್ಪ ವಾಫ್ ಇವರಿಗೆ ದಿಃ 25.09.2024 ರಂದು ಖುದ್ದಾಗಿ ಭೇಟಿಯಾಗಿ ಸದರಿ ವಿಷಯದ ಬಗ್ಗೆ ಚರ್ಚೆ ಮಾಡಲಾಗಿ ಸದರಿ ಅಧ್ಯಕ್ಷರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರಿಗೆ 50 ಪ್ರತಿಶತ ಕ್ಷೇತ್ರವನ್ನು ಕೊಡಲು ಬರುವುದಿಲ್ಲ ಅಂತಾ ನಮ್ಮ ಸಂಘದ ಎಲ್ಲಾ ಸದಸ್ಯರು ಮತ್ತು ಅಧ್ಯಕ್ಷರು ಸೇರಿ ತೀರ್ಮಾನ ಮಾಡಿರುತ್ತೇವೆ ಆದ ಕಾರಣ ಕೊಡಲು ಬರುವುದಿಲ್ಲ ಅಂತಾ ತಿಳಿಸಿದರು.

11. ಅದೇ ರೀತಿ ನಮಗೆ ನೀವು ಎಲ್ಲಿಗೆ ಬೇಕಾದರೂ ಹೋಗಬಹುದು ನೀವು ಏನು ಬೇಕಾದರೂ ಮಾಡಬಹುದು ಎಂದು ನಮಗೆ ಅವಮಾನ ಮಾಡಿದರು. ಕೊನೆಗೆ ದಿಃ30.09.2024 ರಂದು ಸದಲಗಾ ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

ನಾನು ಕೆಲವೊಂದು ದಾಖಲೆಗಳನ್ನು ಖಾಸಗಿ ಪಿರ್ಯಾದಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸಬಲ್ಲೆ.

1. ದಿಃ 14.10.2024 ರಂದು ಪೋಲಿಸ ಉಪನೀರಿಕ್ಷಕರು ಸದಲಗಾ ಇವರಿಗೆ ನೀಡಿದ ದೂರಿನ ಪ್ರತಿ.

2. ಅಂಚೆ ರಸೀದಿ.
3. ಅಂಚೆ ಸ್ವೀಕೃತಿ.
4. ದಿಃ 10.10.2024 ರಂದು ಡಿ.ವೈ.ಎಸ್.ಪಿ ಚಿಕ್ಕೋಡಿ ರವರಿಗೆ ನೀಡಿದ ದೂರಿನ ಪ್ರತಿ.
5. ಮಾನ್ಯ ಪೋಲಿಸ ಅಧೀಕ್ಷಕರು, ಬೆಳಗಾವಿ ರವರಿಗೆ ನೀಡಿದ ದೂರಿನ ಪ್ರತಿ.
6. ಅಂಚೆ ರಸೀದಿ.
7. ಅಂಚೆ ಸ್ವೀಕೃತಿ.
8. ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಸಹಕಾರ ಸಂಘಗಳ ಸಹಾಯಕ ನಿಭಂದಕರು, ಚಿಕ್ಕೋಡಿರವರು ಸಹಕಾರ ಸಂಘಗಳ ಬಗ್ಗೆ ಜರಾಕ್ಸ ಪ್ರತಿಯೊಂದಿಗೆ ಕವಚ ಪತ್ರವನ್ನು ನೀಡಿರುತ್ತಾರೆ.
9. ದಿಃ 25.11.2024 ರಂದು ಮುಖ್ಯ ಅಧಿಕಾರಿ, ಸದಲಗಾರವರು 1993–94 ಸಾಲಿನಿಂದ 2024–25 ಸಾಲಿನವರೆಗೆ ಸದಲಗಾ ಪುರಸಭೆ ಆಸ್ತಿ ದಾಖಲಾತಿಗಳ ಮಾಹಿತಿಯನ್ನು ನೀಡಿರುತ್ತಾರೆ. ಅದರೊಂದಿಗೆ ಒಟ್ಟು 13 ಜನರ ಹೆಸರು ಇರುವ TMC ನಂಬರದ ರಜಿಸ್ಟರ ದಾಖಲೆಗಳನ್ನು ನೀಡಿರುತ್ತಾರೆ.

ಸದರಿ ದಾಖಲೆಗಳನ್ನು ಅನುಕ್ರಮವಾಗಿ ನಿಪಿಃ1 ರಿಂದ ನಿಪಿಃ9, ಒಟ್ಟು 13 ಜನರ ಹೆಸರು ಇರುವ TMC ನಂಬರದ ರಜಿಸ್ಟರ ದಾಖಲೆಗಳನ್ನು ನಿಪಿಃ10 ರಿಂದ ನಿಪಿಃ22 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮಾಡಿಸಲು ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.